# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 349 |
| ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎಸ್ |
| ಉತ್ತರಿಸುವ ದಿನಾಂಕ | 11-12-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ಇಲಾಖೆಗೆ ಒಳಪಡುವ ದೇವಸ್ಥಾನಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಚಕರಿಗೆ ಮತ್ತು ಇತರೆ ಸಹಾಯಕರಿಗೆ ಪ್ರಸ್ತುತ ನೀಡುತ್ತಿರುವ ವೇತನವೆಷ್ಟು; ಕನಿಷ್ಠ ವೇತನ ನಿಯಮ ಅನ್ವಯ ನೀಡಬೇಕಾದ ಕನಿಷ್ಠ ವೇತನ ಎಷ್ಟು; ವೇತನವನ್ನು ಹೆಚ್ಚಿಗೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | • ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಅರ್ಚಕರು/ ನೌಕರರುಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮ 2022ರ ನಿಯಮ 8(2)(i)ರಂತೆ ರೂ. 11,600-24,600 (ಪ್ರವರ್ಗ-1 ರಲ್ಲಿ ಬರುವ ದೇವಾಲಯಗಳ ವೇತನ ಶ್ರೇಣಿ) ಹಾಗೂ ರೂ. 7,275-17,250 (ಪ್ರವರ್ಗ-2 ರಲ್ಲಿ ಬರುವ ದೇವಾಲಯಗಳ ವೇತನ ಶ್ರೇಣಿ) ಗಳಂತೆ ನಿಗಧಿಪಡಿಸಲಾದ ಮಾಸಿಕ ವೇತನವನ್ನು ನೀಡಲಾಗುತ್ತಿದೆ.<br>• ಅಲ್ಲದೇ ಅರ್ಚಕರಿಗೆ ತಟ್ಟೆಕಾಸು ಪಡೆಯುವ ಪದ್ಧತಿ ಇಲ್ಲದೇ ಇರುವ ದೇವಾಲಯಗಳಲ್ಲಿ ಅಥವಾ ತಟ್ಟೆಕಾಸನ್ನು ರೊಕ್ಕವೆಚ್ಚ ಅಥವಾ ಸೇವಾ ಕಮೀಷನ್ ಪಡೆಯಲು ನಿರಾಕರಿಸುವ ಅರ್ಚಕರು ವೇತನ ಶ್ರೇಣಿಯನ್ನು ಪಡೆಯಲು ಇಚ್ಛಿಸಿದ್ದಲ್ಲಿ ಅಂತಹ ಅರ್ಚಕರ ಹುದ್ದೆ ಮತ್ತು ದೇವಾಲಯದ ಆದಾಯಕ್ಕೆ ಅನುಗುಣವಾಗಿ ವೇತನ ಶ್ರೇಣಿಯನ್ನು ನೀಡಲಾಗುತ್ತದೆ.<br>• ಪ್ರವರ್ಗ "ಸಿ" ಶ್ರೇಣಿಯ ದೇವಾಲಯಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಕಂಇ 142 ಮುಅಬಿ 2022, ದಿನಾಂಕ:11.04.2022ರ ಆದೇಶದಂತೆ ವಾರ್ಷಿಕ ರೂ.60,000-00ಗಳ ತಸ್ತೀಕ್ ಮೊತ್ತವನ್ನು ಅರ್ಚಕರುಗಳಿಗೆ ನೀಡಲಾಗುತ್ತಿದೆ.<br>• ಸರ್ಕಾರದ ಆದೇಶ ಸಂಖ್ಯೆ:ಕಂಇ 79 ಮುಸೇವಿ 2023, ದಿನಾಂಕ:06.09.2023ರ ಆದೇಶದಂತೆ ವಾರ್ಷಿಕ ರೂ.60,000-00ಗಳ ವರ್ಷಾಸನವನ್ನು ಅರ್ಚಕರುಗಳಿಗೆ ನೀಡಲಾಗುತ್ತಿದೆ.<br>• ಆದಾಯವಿರುವ "ಎ" ಪ್ರವರ್ಗದ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರುಗಳಿಗೆ/ ನೌಕರರಿಗೆ ಸರ್ಕಾರಿ ನೌಕರರಿಗೆ ನಿಗಧಿಪಡಿಸಲಾದ ವೇತನ ಶ್ರೇಣಿ ರೂ.27,650-52,650 ಗಳನ್ನು ಹಾಗೂ ಆದಾಯ ಕಡಿಮೆ ಇರುವ ಕೆಲವು "ಎ" ಮತ್ತು "ಬಿ" ಪ್ರವರ್ಗದ ದೇವಾಲಯಗಳಲ್ಲಿ ನಿಯಮದಲ್ಲಿ ಅವಕಾಶ ಇರುವಂತೆ ವಾರ್ಷಿಕ ಆದಾಯದಲ್ಲಿ |

| ಪ್ರಶ್ನೆ | | ಉತ್ತರ |
|---|---|---|
| | | ಸಿಬ್ಬಂದಿ ವೆಚ್ಚವು ಶೇಕಡ 35ರ ಮಿತಿಯಲ್ಲಿ ವೇತನ ನಿಗಧಿಪಡಿಸಿ ನೀಡಲಾಗುತ್ತಿದೆ.<br>• ಅರ್ಚಕರ ವೇತನವನ್ನು ಕಾಯ್ದೆ ನಿಯಮಗಳನ್ವಯ ಸಿಬ್ಬಂದಿ ವೆಚ್ಚವು ಶೇಕಡ 35ರ ಮಿತಿಯಲ್ಲಿ ಒಳಗೊಂಡಂತೆ ವೇತನವನ್ನು ನೀಡಲಾಗುತ್ತಿದೆ. |
| ಆ) | ಈ ದೇವಸ್ಥಾನಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಚಕರ ಮತ್ತು ಇತರ ಸಹಾಯಕರ ಮಕ್ಕಳ ಹಾಗೂ ಕುಟುಂಬದವರಿಗೆ ಸರ್ಕಾರ ಯಾವ ಯಾವ ಸೌಲಭ್ಯಗಳನ್ನು ನೀಡುತ್ತಿದೆ; | • ಆಯುಕ್ತರ ಆದೇಶ ಸಂಖ್ಯೆ: HRICE:ADM1/832/2023 E-1218664 ದಿನಾಂಕ: 27.10.2023 ರನ್ವಯ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಕೆಳಕಂಡಂತೆ ಪ್ರೋತ್ಸಾಹ ಧನವನ್ನು ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ. |

| ಕ್ರ. ಸಂ | ಶೈಕ್ಷಣಿಕ ಹಂತ | ಪ್ರೋತ್ಸಾಹ ಧನ (ರೂ.ಗಳಲ್ಲಿ) |
|---|---|---|
| 1. | ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) | 5,000/- |
| 2. | ಐ.ಟಿ.ಐ/ಜೆ.ಒ.ಸಿ/ಡಿಪ್ಲೋಮ | 5,000/- |
| 3 | ಪದವಿ ಶಿಕ್ಷಣ | 7,000/- |
| 4. | ಸ್ನಾತಕೋತ್ತರ ಪದವಿ ಶಿಕ್ಷಣ | 15,000/- |
| 5. | ಇತರೆ ವೈಧ್ಯಕೀಯ ಕೋರ್ಸ್‌ಗಳು (ಆಯುರ್ವೇದಿಕ್, ಹೋಮಿಯೋಪತಿ ಮತ್ತು ಯುನಾನಿ) | 25,000/- |
| 6. | ವೈದ್ಯಕೀಯ / ಡೆಂಟಲ್ ಶಿಕ್ಷಣ | 50,000/- |
| 7. | ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್) | 25,000/- |
| 8. | ವಿದೇಶ ವ್ಯಾಸಂಗ | 1,00,000/- (ಒಂದು ಬಾರಿ ಮಾತ್ರ) |

• ಆಯುಕ್ತರ ಆದೇಶ ಸಂಖ್ಯೆ: HRICE:ADM1/778/ 2023 E-1213475 ದಿನಾಂಕ: 27.10.2023 ರನ್ವಯ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರು ಸೇವೆಯಲ್ಲಿರುವಾಗಲೇ ಮರಣ ಹೊಂದಿದಲ್ಲಿ ಅವರ ಕುಟುಂಬದವರಿಗೆ ರೂ

| | ಪ್ರಶ್ನೆ | ಉತ್ತರ |
|---|---|---|
| | | 2.00ಲಕ್ಷಗಳ ಪರಿಹಾರ ಧನವನ್ನು ಪಾವತಿಸಲಾಗುತ್ತಿದೆ.<br>• ಭಾರತ್ ಗೌರವ್ ಯೋಜನೆ ಅಡಿಯಲ್ಲಿ ಇಲಾಖೆ ವತಿಯಿಂದ ಕೈಗೊಳ್ಳಲಾಗುವ ಕಾಶೀ-ಗಯಾ-ಆಯೋಧ್ಯೆ ದರ್ಶನ, ದಕ್ಷಿಣ ಕ್ಷೇತ್ರ ಯಾತ್ರೆ ದ್ವಾರಕಯಾತ್ರೆಗಳಿಗೆ ಅರ್ಚಕರ ಹಾಗೂ ಅವರ ಕುಟುಂಬದ ಒಬ್ಬರು ಸದಸ್ಯರು ವರ್ಷದಲ್ಲಿ ಒಟ್ಟು 2,400 ಜನರಿಗೆ ಉಚಿತ ಯಾತ್ರೆ ಸೌಲಭ್ಯ ಕಲ್ಪಿಸಲಾಗಿದೆ ಇದಕ್ಕೆ ವಾರ್ಷಿಕ 8 ಕೋಟಿ ವೆಚ್ಚವಾಗಲಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಕಂಇ31ಮುಸೇವಿ 2021 ಬೆಂಗಳೂರು, ದಿನಾಂಕ: 21/08/2021ರ ಆದೇಶ ದನ್ವಯ "ಸಿ" ವರ್ಗದ ದೇವಾಲಯಗಳ ಅನುವಂಶಿಕ ಅರ್ಚಕರ ನಿಧನರಾದ ನಂತರ ಅವರ ಕುಟುಂಬದವರನ್ನು ನೇಮಕಾತಿ ಮಾಡುವ ಅಧಿಕಾರವನ್ನು ಆಯಾಯ ತಾಲ್ಲೂಕುಗಳ ತಹಶೀಲ್ದಾರ್‌ರವರಿಗೆ ನೀಡಲಾಗಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಕಂಇ 31 ಮುಸೇವಿ 2021 ಬೆಂಗಳೂರು ದಿನಾಂಕ: 28/11/2023ರ ಆದೇಶದನ್ವಯ "ಸಿ" ವರ್ಗದ ದೇವಾಲಯಗಳ ಅನುವಂಶಿಕ ಅರ್ಚಕರು ತೀವ್ರ ಅನಾರೋಗ್ಯ ಹಾಗೂ ವಯಸ್ಸಾದ ಕಾರಣಕ್ಕೆ ಅವರ ಕುಟುಂಬದವರನ್ನು ನೇಮಕಾತಿ ಮಾಡುವ ಅಧಿಕಾರವನ್ನು ಆಯಾಯ ತಾಲ್ಲೂಕುಗಳ ತಹಶೀಲ್ದಾರ್‌ರವರಿಗೆ ನೀಡಿ ಆದೇಶಿಸಲಾಗಿದೆ.<br>• ಅರ್ಚಕರಿಗೆ ತಸ್ತೀಕ್/ವರ್ಷಾಸನ ನೇರವಾಗಿ ಅರ್ಚಕರ ಖಾತೆಗೆ ಜಮಾ ಮಾಡಲು (DBT) ಕ್ರಮವಹಿಸಲಾಗುತ್ತಿದೆ. |
| ಇ) | ಸದರಿ ಸಿಬ್ಬಂದಿಗಳ ಮಕ್ಕಳಿಗೆ ಸ್ಕಾಲರ್ ಶಿಪ್ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು: ಉನ್ನತ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ ಎಷ್ಟು ಮೊತ್ತದ ಸ್ಕಾಲರ್ ಶಿಪ್ ನೀಡಲಾಗುತ್ತಿದೆ; | • ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ಧನವನ್ನು ಆಯುಕ್ತರ **ಆದೇಶ ಸಂಖ್ಯೆ: HRICE:ADM1/832/ 2023 E-1218664 ದಿನಾಂಕ: 27.10.2023** ರನ್ವಯ ಅರ್ಚಕರ/ನೌಕರರ ಮಕ್ಕಳಿಗೆ ಈ ಕೆಳಕಂಡಂತೆ ಪ್ರೋತ್ಸಾಹ ಧನವನ್ನು ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ. |

| ಕ್ರ. ಸಂ | **ಶೈಕ್ಷಣಿಕ ಹಂತ** | **ಪ್ರೋತ್ಸಾಹ ಧನ (ರೂ.ಗಳಲ್ಲಿ)** |
|---|---|---|
| 1. | ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) | 5,000/- |
| 2. | ಐ.ಟಿ.ಐ/ಜೆ.ಒ.ಸಿ/ಡಿಪ್ಲೋಮ | 5,000/- |
| 3 | ಪದವಿ ಶಿಕ್ಷಣ | 7,000/- |
| 4. | ಸ್ನಾತಕೋತ್ತರ ಪದವಿ ಶಿಕ್ಷಣ | 15,000/- |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><td>5.</td><td>ಇತರೆ ವೈದ್ಯಕೀಯ ಕೋರ್ಸ್‌ಗಳು (ಆಯುರ್ವೇದಿಕ್, ಹೋಮಿಯೋಪತಿ ಮತ್ತು ಯುನಾನಿ)</td><td>25,000/-</td></tr>
<tr><td>6.</td><td>ವೈದ್ಯಕೀಯ / ಡೆಂಟಲ್ ಶಿಕ್ಷಣ</td><td>50,000/-</td></tr>
<tr><td>7.</td><td>ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್)</td><td>25,000/-</td></tr>
<tr><td>8.</td><td>ವಿದೇಶ ವ್ಯಾಸಂಗ</td><td>1,00,000/- (ಒಂದು ಬಾರಿ ಮಾತ್ರ)</td></tr>
</table>
</td></tr>
<tr><td></td><td>ಸದರಿ ಅರ್ಚಕರು ಮತ್ತು ಇತರ ಸಹಾಯಕ ಕುಟುಂಬ ವರ್ಗದವರಿಗೆ ಆಸ್ಪತ್ರೆಗಳಲ್ಲಿ ಉಚಿತ ಶಸ್ತ್ರಚಿಕಿತ್ಸೆ ನೀಡಲು ಸರ್ಕಾರ ಯಾವ ಯೋಜನೆ ಜಾರಿಗೊಳಿಸಿದೆ;</td><td>ಸದರಿ ಅರ್ಚಕರು ಮತ್ತು ಇತರ ಸಹಾಯಕ ಕುಟುಂಬ ವರ್ಗದವರಿಗೆ ಆಸ್ಪತ್ರೆಗಳಲ್ಲಿ ಉಚಿತ ಶಸ್ತ್ರಚಿಕಿತ್ಸೆ ನೀಡುವ ಕುರಿತಂತೆ ಯಾವುದೇ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ.</td></tr>
</table>

ಸಂಖ್ಯೆ: ಕಂಇ 156 ಮುಸಪು 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು